# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 975
2) ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)
3) ಉತ್ತರಿಸಬೇಕಾದ ದಿನಾಂಕ : 20-08-2025
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಕರಾವಳಿ ಜಿಲ್ಲೆಗಳಲ್ಲಿ ಕಳೆದ 2 ವರ್ಷಗಳಲ್ಲಿ ಮೀನುಗಾರಿಕೆ ಸಮುದ್ರಕ್ಕೆ ತೆರಳಿದ ಎಷ್ಟು ಮಂದಿ ಮೃತಪಟ್ಟಿದ್ದಾರೆ; ಎಷ್ಟು ಮೃತ ದೇಹಗಳು ಪತ್ತೆ ಹಚ್ಚಲಾಗಿದೆ; ಮೃತಪಟ್ಟ ಕುಟುಂಬಗಳಿಗೆ ನೀಡಿದ ಪರಿಹಾರ ಎಷ್ಟು; ನೀಡಲು ಬಾಕಿ ಇರುವ ಪ್ರಕರಣಗಳೆಷ್ಟು; ಯಾವ ಮಾನದಂಡದಲ್ಲಿ ವಿತರಿಸಲಾಗಿದೆ; (ವಿವರ ನೀಡುವುದು) | ಕರಾವಳಿ ಜಿಲ್ಲೆಗಳಲ್ಲಿ ಕಳೆದ 2 ವರ್ಷಗಳಲ್ಲಿ ಸಮುದ್ರಕ್ಕೆ ಮೀನುಗಾರಿಕೆಗಾಗಿ ತೆರಳಿದವರಲ್ಲಿ ಮೃತಪಟ್ಟವರ ಸಂಖ್ಯೆ, ಪತ್ತೆ ಹಚ್ಚಲಾದ ಮೃತ ದೇಹಗಳ ಸಂಖ್ಯೆ, ವಿತರಿಸಲಾದ ಪರಿಹಾರದ ಮೊತ್ತ ಮತ್ತು ಬಾಕಿ ಇರುವ ಪ್ರಕರಣಗಳ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br><br>ಮೃತ ಮೀನುಗಾರರ ವಾರಸುದಾರರಿಗೆ ಪರಿಹಾರವನ್ನು ನೀಡಲು ದಿನಾಂಕ: 21-11-2024 ರಿಂದ ಅನುಸರಿಸುತ್ತಿರುವ ಮಾನದಂಡಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| ಆ) | ಮೀನುಗಾರಿಕೆ ಸಮುದ್ರಕ್ಕೆ ತೆರಳುವಾಗ ಕಡ್ಡಾಯವಾಗಿ ವಿಮೆ ಮಾಡಲಾಗಿದೆಯೇ ಇದನ್ನು ಉಲ್ಲಂಘಿಸಿದವರ ಮೇಲೆ ತೆಗೆದುಕೊಂಡ ಕ್ರಮಗಳೇನು;<br>(ವಿವರ ನೀಡುವುದು) | ಯಾಂತ್ರೀಕೃತ ದೋಣಿಯಲ್ಲಿ ನಡೆಸಲಾಗುವ ಮೀನುಗಾರಿಕೆಯಲ್ಲಿ ತೊಡಗಿಸಿಕೊಳ್ಳುವ ಮೀನುಗಾರರನ್ನು ಹೊರತುಪಡಿಸಿ ಉಳಿದ ಸಮುದ್ರ ಮೀನುಗಾರಿಕೆಯ ಮೀನುಗಾರರಿಗೆ ವಿಮೆ ಕಡ್ಡಾಯವಲ್ಲ. ಯಾಂತ್ರೀಕೃತ ದೋಣಿಯಲ್ಲಿ ನಡೆಸಲಾಗುವ ಮೀನುಗಾರಿಕೆಯಲ್ಲಿ ತೊಡಗಿಕೊಳ್ಳುವ ಮೀನುಗಾರರೆಲ್ಲರು ದೋಣಿಯ ಮಾಲೀಕನನ್ನು ಒಳಗೊಂಡಂತೆ ವಿಮೆ ತೆಗೆದುಕೊಳ್ಳುವುದು ಕಡ್ಡಾಯವಾಗಿರುತ್ತದೆ. ಉಲ್ಲಂಘಿಸಿದವರಿಗೆ ಮೀನುಗಾರಿಕೆ ನಡೆಸಲು ಪರವಾನಗಿ ನೀಡಲಾಗುವುದಿಲ್ಲ.<br><br>ಮುಂದುವರೆದು, ಮೀನುಗಾರರ ಸಹಕಾರಿ ಸಂಘದ ಸದಸ್ಯರಾಗಿರುವ ಮೀನುಗಾರರೆಲ್ಲರು ವಿಮೆಯನ್ನು ಹೊಂದಿರುತ್ತಾರೆ. ವಿಮೆಯ ವಂತಿಗೆಯನ್ನು ಜನತಾ ಸಾಮೂಹಿಕ ಅಪಘಾತ ವಿಮಾ ಯೋಜನೆಯಡಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸಹಭಾಗಿತ್ವದಲ್ಲಿ ಪ್ರತಿವರ್ಷ ಸಹಕಾರಿ ಸಂಘದ ಸದಸ್ಯರ ಪರವಾಗಿ ವಿಮೆಯ ವಂತಿಗೆಯನ್ನು ಪಾವತಿ ಮಾಡುತ್ತದೆ. ಸಂಘದ ಸದಸ್ಯತ್ವ ಹೊಂದಿರುವ ಮೀನುಗಾರರು ಮೀನುಗಾರಿಕೆಯಲ್ಲಿ ತೊಡಗಿರುವಾಗ ಮೃತರಾದಲ್ಲಿ ಅಥವಾ ಶಾಶ್ವತ ಅಂಗವೈಕಲ್ಯಕ್ಕೆ ತುತ್ತಾದಲ್ಲಿ ಮೃತರ ವಾರಸುದಾರರಿಗೆ ರೂ.5.00 ಲಕ್ಷ ಹಾಗು ಭಾಗಶ: ಅಂಗವೈಕಲ್ಯತೆಗೆ ರೂ.2.50 ಲಕ್ಷ ವಿಮೆ ಪರಿಹಾರವನ್ನು ನೀಡಲಾಗುತ್ತದೆ. |

| | | |
|---|---|---|
| ಇ) | ಮೀನುಗಾರಿಕೆಗೆ ತೆರಳಿದ ಸಮಯದಲ್ಲಿ ನೀರುಪಾಲಾದ ಮೀನುಗಾರಿಕೆ ಕುಟುಂಬಗಳಿಗೆ ಪುರ್ನವಸತಿ ಕಲ್ಪಿಸಲು ಸರ್ಕಾರ ಯಾವ ಯೋಜನೆ ಅಳವಡಿಸಿಕೊಳ್ಳಲಾಗಿದೆ;<br>(ವಿವರ ನೀಡುವುದು) | ಮೀನುಗಾರಿಕೆಗೆ ತೆರಳಿದ ಸಮಯದಲ್ಲಿ ನೀರುಪಾಲಾದ ಮೀನುಗಾರಿಕೆ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸುವ ಯೋಜನೆಯಿರುವುದಿಲ್ಲ. ಮೃತರ ವಾರಸುದಾರರಿಗೆ ಮೀನುಗಾರರ ಸಂಕಷ್ಟ ಪರಿಹಾರ ಯೋಜನೆಯಡಿ ರೂ.10.00 ಲಕ್ಷ ಪರಿಹಾರವನ್ನು ನೀಡಲಾಗುತ್ತದೆ. ಮತ್ಸ್ಯಾಶ್ರಯ ಯೋಜನೆಯಡಿ ಮನೆ ನಿರ್ಮಿಸಿಕೊಳ್ಳಲು ಸಹಾಯಧನ ಪಡೆಯಲು ಅವಕಾಶವಿದೆ. |
| ಈ) | ಮೀನುಗಾರಿಕೆ ಇಲಾಖೆಯಿಂದ 2023-24, 2024-25ರಲ್ಲಿ ಖರ್ಚು ಮಾಡಿದ ಅನುದಾನ ಎಷ್ಟು; ಯಾವ ಯಾವ ಉದ್ದೇಶಕ್ಕಾಗಿ ಖರ್ಚು ಮಾಡಲಾಗಿದೆ?<br>(ವಿವರ ನೀಡುವುದು) | ಮೀನುಗಾರಿಕೆ ಇಲಾಖೆಯಿಂದ 2023-24 ಮತ್ತು 2024-25 ರಲ್ಲಿ ಖರ್ಚು ಮಾಡಿದ ಅನುದಾನದ ವಿವರವನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ |

ಸಂಖ್ಯೆ: ಪಸಂಮೀ ಇ-148 ಮೀಇಇ 2025

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿಸೋಜಾ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 975ಕ್ಕೆ

## ಅನುಬಂಧ-01

| ವರ್ಷ | 2023-24 | | | | 2024-25 | | | |
|---|---|---|---|---|---|---|---|---|
| ಜಿಲ್ಲೆ | ಮೃತಪಟ್ಟವರ ಸಂಖ್ಯೆ | ಪತ್ತೆಯಾದ ಮೃತ ದೇಹಗಳ ಸಂಖ್ಯೆ | ಮೃತರ ವಾರಸುದಾರರಿಗೆ ನೀಡಿದ ಪರಿಹಾರ ಮೊತ್ತ(ಲಕ್ಷಗಳಲ್ಲಿ) | ಪರಿಹಾರ ನೀಡಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ | ಮೃತಪಟ್ಟವರ ಸಂಖ್ಯೆ | ಪತ್ತೆಯಾದ ಮೃತ ದೇಹಗಳ ಸಂಖ್ಯೆ | ಮೃತರ ವಾರಸುದಾರರಿಗೆ ನೀಡಿದ ಪರಿಹಾರ ಮೊತ್ತ(ಲಕ್ಷಗಳಲ್ಲಿ) | ಪರಿಹಾರ ನೀಡಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ |
| ದಕ್ಷಿಣ ಕನ್ನಡ | 04 | 04 | 24 | 0 | 04 | 04 | 34 | 0 |
| ಉಡುಪಿ | 27 | 27 | 156 | 01 | 23 | 23 | 168 | 02 |
| ಉತ್ತರ ಕನ್ನಡ | 26 | 25 * | 150 | 01 | 29 | 29 | 232 | 0 |
| ಒಟ್ಟು | **57** | **56** | **330** | **02** | **56** | **56** | **434** | **02** |

- * 2023-24 ಸಾಲಿನಲ್ಲಿ **ಕಾರವಾರ** ಜಿಲ್ಲೆಯ ಭಟ್ಕಳ ತಾಲ್ಲೂಕಿನ ಗೋಪಾಲ ಶನಿಯಾರ್ ನಾಯ್ಕ ರವರ ಮೃತ ದೇಹವು ಪತ್ತೆಯಾಗಿರುವುದಿಲ್ಲ. ವಾರಸುದಾರರಿಗೆ ಪರಿಹಾರ ನೀಡಲಾಗಿದೆ.

ಮೀನುಗಾರಿಕೆ ನಿರ್ದೇಶಕರು

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಐವನ್ ಡಿಸೋಜಾ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 9ಕ್ಕೆ

**ಅನುಬಂಧ-2**

**ದಿನಾಂಕ: 21/11/2024 ರಿಂದ ಅನ್ವಯಿಸುವಂತೆ ಸಂಕಷ್ಟ ಪರಿಹಾರ ನಿಧಿಯಡಿ ನೀಡಲಾಗುವ ಪರಿಹಾರಕ್ಕೆ ಮಾರ್ಗಸೂಚಿಗಳು**

1) **ಸಂಕಷ್ಟ ಪರಿಹಾರ ನಿಧಿಯಿಂದ ಪರಿಹಾರ ಪಡೆಯಲು ಅರ್ಹತೆ:**

ಅ) ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.

ಆ) ಒಳನಾಡು ಮತ್ತು ಕರಾವಳಿ ಮೀನುಗಾರಿಕೆಯಲ್ಲಿ ಮತ್ತು ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿರುವಾಗ ಅವಘಡ ಸಂಭವಿಸಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಪರಿಹಾರ ನೀಡುವುದು.

ಇ) ಮೀನುಗಾರಿಕೆಯಲ್ಲಿ ಮತ್ತು ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿರುವ ಬಗ್ಗೆ ಸ್ಥಳೀಯ ಮೀನುಗಾರಿಕೆ ಇಲಾಖೆಯ ಅಧಿಕಾರಿಗಳಿಂದ ದೃಢೀಕರಿಸಿರಬೇಕು.

2) **ಅನ್ವಯಿಸುವ ಪ್ರಕರಣಗಳು ಹಾಗೂ ಪರಿಹಾರದ ಮೊತ್ತ:**

**ಅ) ಮರಣ ಪ್ರಕರಣ :**

1. ಮೀನುಗಾರಿಕೆಯಲ್ಲಿ ಮತ್ತು ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿರುವಾಗ ಮರಣಹೊಂದಿದ ಪ್ರಕರಣಗಳಿಗೆ ದಿನಾಂಕ:**21/11/2024** ರಿಂದ ಅನ್ವಯವಾಗುವಂತೆ, **ರೂ.10.00** ಲಕ್ಷ ಪರಿಹಾರ ನೀಡಲಾಗುವುದು.
2. ಮೃತರು ಅವಿವಾಹಿತರಾಗಿದ್ದಲ್ಲಿ ಪರಿಹಾರ ಮೊತ್ತವನ್ನು ಪೋಷಕರಿಗೆ ನೀಡುವುದು. ಮೃತರು ವಿವಾಹಿತರಾಗಿದ್ದಲ್ಲಿ ಪರಿಹಾರ ಮೊತ್ತದ ಶೇ. 50 ರಷ್ಟನ್ನು ಮೃತರ ಪತ್ನಿಗೆ ಮತ್ತು ಉಳಿದ ಶೇ. 50 ರಷ್ಟನ್ನು ಮೃತರ ಮಕ್ಕಳಿಗೆ ಮತ್ತು ಮೃತರ ಪೋಷಕರಿಗೆ ಸಮಾನವಾಗಿ ನೀಡುವುದು. ಮೃತರ ಮಕ್ಕಳು ಅಪ್ರಾಪ್ತರಾಗಿದ್ದು ಮತ್ತು ಮೃತರ ಪತ್ನಿಯೂ ಸಹ ಮರಣ ಹೊಂದಿದ್ದರೆ, ಮೃತರ ಮಕ್ಕಳ ಹೆಸರಿಗೆ ರೂ.10.00 ಲಕ್ಷ ಪರಿಹಾರದ ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ ಠೇವಣಿ ಇರಿಸಿ, ಅದರಿಂದ ಬರುವ ಬಡ್ಡಿ ಹಣವನ್ನು ಮಾತ್ರ ಮೃತರ ಮಕ್ಕಳ ಪೋಷಣೆಯ ಜವಾಬ್ದಾರಿಯನ್ನು ವಹಿಸಿಕೊಂಡಿರುವ ಕುಟುಂಬದ ಸದಸ್ಯರಿಗೆ ನೀಡಲು ಕ್ರಮವಹಿಸುವುದು.

ಆ) **ಪರಿಹಾರ ಮೊತ್ತದ ಪಾವತಿ**:

3. ಮೀನುಗಾರಿಕೆ ನಿರ್ದೇಶಕರು ಸಂತ್ರಸ್ತರಿಗೆ ಸೂಕ್ತ ಪರಿಹಾರ ಮಂಜೂರು ಮಾಡಿ ನಂತರ ಮುಂಬರುವ ಮೀನುಗಾರರ ಸಂಕಷ್ಟ ಪರಿಹಾರ ನಿಧಿ ಸಮಿತಿ ಸಭೆಯಲ್ಲಿ ಘಟನೋತ್ತರ ಅನುಮೋದನೆ ಪಡೆಯುವುದು. ಪರಿಹಾರ ನಿಧಿಯ ಖಾತೆಯಿಂದ ನೇರವಾಗಿ ಹಣವನ್ನು ಸಂತ್ರಸ್ತರ ಬ್ಯಾಂಕ್ ಖಾತೆಗೆ ಪಾವತಿ ಮಾಡುವುದು.

ಮೀನುಗಾರಿಕೆ ನಿರ್ದೇಶಕರು

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಐವನ್ ಡಿಸೋಜಾ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) ರವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ: 975ಕ್ಕೆ

## ಅನುಬಂಧ-03

### 2023-24 ಮತ್ತು 2024-25 ರಲ್ಲಿ ವಿವಿಧ ಯೋಜನೆ / ಕಾರ್ಯಕ್ರಮಗಳಿಗೆ ವೆಚ್ಚ ಮಾಡಿದ ಅನುದಾನದ ವಿವರ

ಇಲಾಖೆ: ಮೀನುಗಾರಿಕೆ

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಯೋಜನೆ/ಕಾರ್ಯಕ್ರಮದ ಹೆಸರು ಮತ್ತು ಲೆಕ್ಕ ಶೀರ್ಷಿಕೆ | 2023-24 | | | 2024-25 | | |
|---|---|---|---|---|---|---|---|
| | | ನಿಗದಿಪಡಿಸಿದ ಅನುದಾನ | ಬಿಡುಗಡೆಯಾದ ಅನುದಾನ | ವೆಚ್ಚವಾದ ಅನುದಾನ | ನಿಗದಿಪಡಿಸಿದ ಅನುದಾನ | ಬಿಡುಗಡೆಯಾದ ಅನುದಾನ | ವೆಚ್ಚವಾದ ಅನುದಾನ |
| **ರಾಜ್ಯ ವಲಯ** | | | | | | | |
| S01 | ನಿರ್ದೇಶನ ಮತ್ತು ಆಡಳಿತ 2405-00-001-0-01 | 3878.79 | 3878.79 | 3726.44 | 4826.79 | 4826.79 | 4227.69 |
| S02 | ಸಮಗ್ರ ಮೀನುಗಾರಿಕೆ ಅಭಿವೃದ್ಧಿ ಕಾರ್ಯಕ್ರಮಗಳು (ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ* ) 2405-00-101-0-03 | 1780.00 | 1779.98 | 1707.96 | 1674.55 | 1674.55 | 1674.54 |
| S03 | ಜಲಾಶಯಗಳಲ್ಲಿ ಮೀನುಮರಿ ಬಿತ್ತನೆ * 2405-00-101-0-54 | 0.00 | 0.00 | 0.00 | 0.00 | 0.00 | 0.00 |
| S04 | ನೀಲಿ ಕ್ರಾಂತಿ ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ-ಕೇ.ಪು.ಯೋ 2405-00-101-0-58 | 10685.35 | 8915.65 | 8915.65 | 10454.20 | 10454.20 | 9812.81 |
| S05 | ಸಾಂಪ್ರದಾಯಕ ದೋಣಿಗಳಿಗೆ ಸೀಮೆಎಣ್ಣೆ ಸರಬರಾಜು 2405-00-103-0-17 | 3839.32 | 3839.32 | 3838.95 | 3000.00 | 3000.00 | 3000.00 |
| | **ಮೀನುಗಾರರ ಕಲ್ಯಾಣ ಯೋಜನೆಗಳು ಕೆ.ಪು.ಯೋ** | | | | | | |
| ಅ) | ಉಳಿತಾಯ ಮತ್ತು ಪರಿಹಾರ ಯೋಜನೆ 2405-00-120-0-07 | 612.00 | 408.00 | 408.00 | 1155.16 | 1155.16 | 1155.16 |
| ಆ) | ಸಮೂಹಿಕ ಅಪಘಾತ ವಿಮಾ ಯೋಜನೆ | 0.00 | 0.00 | 0.00 | 0.00 | 0.00 | 0.00 |
| S10 | ವಾಣಿಜ್ಯ ಬ್ಯಾಂಕುಗಳಿಗೆ ವ್ಯತ್ಯಾಸದ ಬಡ್ಡಿ ಮರುಪಾವತಿ * 2405-00-195-0-01 | 0.00 | 0.00 | 0.00 | 0.00 | 0.00 | 0.00 |
| S11 | ಕರಾವಳಿ ಕೂಡು ರಸ್ತೆಗಳ ನಿರ್ವಹಣೆ 2405-00-337-0-01 | 2343.00 | 2343.00 | 2343.00 | 0.00 | 0.00 | 0.00 |
| S12 | ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ 2405-00-101-0-66 | 0.00 | 0.00 | 0.00 | 11.38 | 11.38 | 11.38 |

| ಕ್ರ.ಸಂ | ಯೋಜನೆ/ಕಾರ್ಯಕ್ರಮದ ಹೆಸರು ಮತ್ತು ಲೆಕ್ಕ ಶೀರ್ಷಿಕೆ | 2023-24 | | | 2024-25 | | |
|---|---|---|---|---|---|---|---|
| | | ನಿಗದಿಪಡಿಸಿದ ಅನುದಾನ | ಬಿಡುಗಡೆಯಾದ ಅನುದಾನ | ವೆಚ್ಚವಾದ ಅನುದಾನ | ನಿಗದಿಪಡಿಸಿದ ಅನುದಾನ | ಬಿಡುಗಡೆಯಾದ ಅನುದಾನ | ವೆಚ್ಚವಾದ ಅನುದಾನ |
| S13 | ಸಂಕಷ್ಟ ಪರಿಹಾರ ನಿಧಿಗೆ ಅಂಶದಾನಗಳು 2405-00-103-0-15 | 400.00 | 400.00 | 400.00 | 400.00 | 400.00 | 400.00 |
| S14 | ತುಂಗಾ ಭದ್ರಾ ನಿಗಮದ ಮೀನುಗಾರಿಕೆಯ ಖರ್ಚಿನ ಪಾಲು 2405-00-101-0-31 | 1.00 | 0.00 | 0.00 | 1.00 | 1.00 | 0.00 |
| S15 | ವಿದ್ಯಾನಿಧಿ ಯೋಜನೆ 2202-80-107-0-08 | 100.00 | 80.00 | 69.67 | 100.00 | 82.19 | 82.19 |
| S16 | ಉತ್ತರ ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಕೇಂದ್ರ ಸ್ಥಾಪನೆ 2405-00-101-0-67 | 0.00 | 0.00 | 0.00 | 0.00 | 0.00 | 0.00 |
| S17 | ಮತ್ಸ್ಯಾಶ್ರಯ ಯೋಜನೆ 2405-00-103-0-20 | 482.51 | 333.33 | 200.00 | 0.00 | 0.00 | 0.00 |
| S18 | ಸೀಮೆ ಎಣ್ಣೆ ದೋಣಿಗಳನ್ನು ಪೆಟ್ರೋಲ್ ದೋಣಿಗಳಾಗಿ ಪರಿವರ್ತಿಸಲು ಪ್ರೋತ್ಸಾಹ 2405-00-103-0-24 | 160.68 | 0.00 | 0.00 | 0.00 | 0.00 | 0.00 |
| S19 | ಗಿರಿಜನ ಪ್ರದೇಶ ಉಪ ಯೋಜನೆ | 0.00 | 0.00 | 0.00 | 0.00 | 0.00 | 0.00 |
| S20 | ಮೀನುಮಾರುಕಟ್ಟೆ ನಿರ್ಮಾಣಕ್ಕೆ ಸಹಾಯ | 0.00 | 0.00 | 0.00 | 0.00 | 0.00 | 0.00 |
| S21 | ಮೀನುಗಾರರ ಕಲ್ಯಾಣ ಕಾರ್ಯಕ್ರಮಕ್ಕೆ ಹೆಚ್ಚುವರಿ ರಾಜ್ಯದ ಪಾಲು ( ಮತ್ಸ್ಯ ಆಶಾ ಕಿರಣ) 2405-00-120-0-09 | 0.00 | 0.00 | 0.00 | 300.00 | 257.80 | 257.80 |
| | **ಒಟ್ಟು ರಾಜ್ಯ ವಲಯ** | **24282.65** | **21978.07** | **21609.67** | **21923.08** | **21863.07** | **20621.57** |
| **ಜಿಲ್ಲಾ ವಲಯ** | | | | | | | |
| D01 | ಜಿಲ್ಲಾ ಮತ್ತು ಇತರೆ ಸಿಬ್ಬಂದಿ 2405-00-101-0-26 | 3789.17 | 3789.17 | 3471.53 | 3919.58 | 4174.66 | 3805.04 |
| D02 | ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ 2405-00-101-0-27 | 503.05 | 428.99 | 366.57 | 503.05 | 427.82 | 427.82 |
| D03 | ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ 2405-00-101-0-28 | 914.90 | 914.59 | 866.27 | 1135.61 | 1135.61 | 1061.56 |

| ಕ್ರ.ಸಂ | ಯೋಜನೆ/ಕಾರ್ಯಕ್ರಮದ ಹೆಸರು ಮತ್ತು ಲೆಕ್ಕ ಶೀರ್ಷಿಕೆ | 2023-24 | | | 2024-25 | | |
|---|---|---|---|---|---|---|---|
| | | ನಿಗದಿಪಡಿಸಿದ ಅನುದಾನ | ಬಿಡುಗಡೆಯಾದ ಅನುದಾನ | ವೆಚ್ಚವಾದ ಅನುದಾನ | ನಿಗದಿಪಡಿಸಿದ ಅನುದಾನ | ಬಿಡುಗಡೆಯಾದ ಅನುದಾನ | ವೆಚ್ಚವಾದ ಅನುದಾನ |
| D04 | ಮೀನು ಮಾರುಕಟ್ಟೆಗಳ ಪುನರ್ ನಿರ್ಮಾಣ ಮತ್ತು ಮೀನುಮಾರಾಟಕ್ಕೆ ಒದಗುವ ಸಾಮಗ್ರಿಗಳ ಖರೀದಿಗೆ ಸಹಾಯ 2405-00-101-0-30 | 191.10 | 191.07 | 186.83 | 191.10 | 191.10 | 188.41 |
| D05 | ಪ್ರದರ್ಶನ ಮತ್ತು ತರಬೇತಿ 2405-00-101-0-32 | 150.25 | 150.19 | 146.76 | 156.26 | 156.26 | 155.93 |
| | **ಒಟ್ಟು ಜಿಲ್ಲಾ ವಲಯ** | **5548.47** | **5474.01** | **5037.96** | **5905.60** | **6085.45** | **5638.76** |
| **ಕಾಮಗಾರಿಗಳು** | | | | | | | |
| CW1 | ಮೀನುಗಾರಿಕೆ ಬಂದರುಗಳ ಹೂಳೆತ್ತುವಿಕೆ- ಕೇ.ಪು.ಯೋ 4405-00-103-1-02 | 0.00 | 0.00 | 0.00 | 0.00 | 0.00 | 0.00 |
| CW2 | ಮೀನುಗಾರಿಕೆ ಬಂದರುಗಳ ನಿರ್ಮಾಣ - ಕೇ.ಪು.ಯೋ 4405-00-103-6-01 & 02 | 4771.99 | 4771.99 | 4771.99 | 215.00 | 0.00 | 0.00 |
| CW3 | ಮೀನುಗಾರಿಕೆ ಜೆಟ್ಟಿ ಮತ್ತು ಮೀನು ಇಳಿದಾಣಗಳ ನಿರ್ಮಾಣ / ಮೀನುಗಾರಿಕೆ ಬಂದರುಗಳ ಇಳಿದಾಣ ಕೇಂದ್ರಗಳ ನವೀಕರಣ ಮತ್ತು ಹೂಳೆತ್ತುವ ಕಾರ್ಯಕ್ರಮ. 4405-00-104-0-02 | 1570.00 | 1570.00 | 1570.00 | 3854.32 | 3837.49 | 3837.49 |
| CW4 | ಮೀನುಗಾರಿಕೆ ಕೊಂಡಿ ರಸ್ತೆಗಳ, ಸೇತುವೆಗಳ ಮತ್ತು ಜೆಟ್ಟಿಗಳ ನಿರ್ಮಾಣ; ನಬಾರ್ಡ ಸಹಾಯ 4405-00-800-2-03 | 500.00 | 500.00 | 500.00 | 1636.00 | 1636.00 | 1636.00 |
| CW5 | ಹಾವೇರಿ ಜಿಲ್ಲೆಯಲ್ಲಿ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ ಸ್ಥಾಪನೆ 4405-00-101-3-01 | 130.00 | 0.00 | 0.00 | 0.00 | 0.00 | 0.00 |
| | **ಒಟ್ಟು ಕಾಮಗಾರಿಗಳು** | **6971.99** | **6841.99** | **6841.99** | **5705.32** | **5473.49** | **5473.49** |
| | **ಒಟ್ಟಾರೆ** | **36803.11** | **34294.07** | **33489.62** | **33534.00** | **33422.01** | **31733.82** |

(signature)

ಮೀನುಗಾರಿಕೆ ನಿರ್ದೇಶಕರು